ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

ಸಿ.ಸಿ. ಸಂಖ್ಯೆಃ 183/2020 CW-1 PW- 1

| | |
|---|---|
| ಹೆಸರು | ಆಂಜನೇಯ |
| ತಂದೆಯ ಹೆಸರು | ಪುರುಷೋತ್ತಮ |
| ವಯಸ್ಸು | 40 |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ರಾಜರಬಂಡ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-06-2024

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 4 ನನ್ನ ಹೆಂಡತಿ. ಚಾ.ಸಾ. 5 ಮತ್ತು 6 ಗೊತ್ತು. ಆರೋಪಿತರು ಗೊತ್ತು. 4 ವರ್ಷಗಳ ಹಿಂದೆ ಬೆ. 7.00 ಕ್ಕೆ ನಮ್ಮ ಮನೆಯ ಮುಂದೆ ಇದ್ದಾಗ ಆರೋಪಿತರು ಕಟ್ಟಿಗೆಗಳನ್ನು ತೆಗೆದಿಕೋ ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿತರು ಕೈಯಿಂದ ಮತ್ತು ಬಡಿಗೆಗಳಿಂದ ನನ್ನ ಕೈಗಳಿಗೆ ಹೊಡೆಬಡೆ ಮಾಡಿರುತ್ತಾರೆ. ಗಾಯಗೊಂಡ ನನ್ನನ್ನು ರಿಮ್ಸ್ ಆಸ್ಪತ್ರಗೆ ಸೇರಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ದೂರು ಪಡೆದಿರುತ್ತಾರೆ. ನಾನು ನೀಡಿದ ದೂರನ್ನು ನೋಡುತ್ತಿದ್ದು, ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ. 1 ಕ್ಕೆ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ನಾನು ಆ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆ ದಿನ ಆರೋಪಿತರು ಬಡಿಯಲು ಉಪಯೋಗಿಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದೆ ಇದ್ದು, ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

<u>ಪಾಟೀ ಸವಾಲು : ಸಸಅ ಅವರಿಂದ</u>

ಆ ದಿನ ಚಾ.ಸಾ. 4 ರಿಂದ 6 ಜಗಳ ಬಿಡಿಸಿದ ನಂತರ ಆರೋಪಿತರು ಈ ದಿನ ಉಳಿದಿರಿ ಇನ್ನೊಂದು ಸಲ ಸಿಕ್ಕರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿತರ ಪರ ಶ್ರೀ. ಎಸ್.ಎಸ್.ಎನ್. ವಕೀಲರಿಂದ</u>

ಘಟನೆ ನಡೆದಿದೆ ಎಂದು ಹೇಳಿದ ದಿನಾಂಕ, ತಿಂಗಳು, ವರ್ಷ ಹೇಳಲು ಬರುವುದಿಲ್ಲ. ಕಟ್ಟಿಗೆಗಳನ್ನು ಹಾಕಿದ ಜಾಗ ನಮಗೆ ಸೇರಿದ್ದು ಎಂದು ಪೋಲೀಸರಿಗೆ ದಾಖಲೆಗಳನ್ನು ನೀಡಿಲ್ಲ. ಆರೋಪಿತರು ಬಡಿಗೆಯಿಂದ ಹೊಡೆಬಡೆ ಮಾಡಿ ನನ್ನ ಕೈ ಮುರಿದಿರುತ್ತಾರೆ. ಮು.ಮಾ. 1 ರ ಬಡಿಗೆ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಸಿಂಧನೂರು ತಾಲೂಕು ತುರ್ವಿಹಾಳ ಗ್ರಾಮದವನು. ನಮ್ಮ ಮನೆಯ ಮುಂದೆ ಇರುವ ಕಟ್ಟಿಗೆಗಳನ್ನು ತೆಗೆದಯುವಂತೆ ಆರೋಪಿತರಿಗೆ ಹಲವಾರು ಸಲ ಹೇಳಿದ್ದೇನೆ. ಆ ಬಗ್ಗೆ ದೂರಿನಲ್ಲಿ ಹೇಳಿ ಬರೆಸಿದ್ದು ನೆನಪಿಲ್ಲ. ನನ್ನ ಕೈಗೆ ರಕ್ತಗಾಯವಾಗಿ ಬಟ್ಟೆಗೆ ರಕ್ತ ಹತ್ತಿತ್ತು. ಸದರಿ ಬಟ್ಟೆಗಳನ್ನು ಪೋಲೀಸರು ಜಪ್ತಿಪಡಿಸಿಕೊಂಡಿಲ್ಲ. ಆಸ್ಪತ್ರಗೆ ಚಿಕಿತ್ಸೆ ಸಲುವಾಗಿ ನನ್ನನ್ನು ಮೋಟಾರ್ ಸೈಕಲ್ ಮೇಲೆ ಕರೆದುಕೊಂಡು ಹೋಗಿರುತ್ತಾರೆ. ನನಗೆ ಮದ್ಯಪಾನ ಮಾಡು ಚಟ ಇದೆ ಎಂದರೆ ಸರಿಯಲ್ಲ. ನಾನು 25 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಮನೆಯ ಮುಂದಿನ ಜಾಗದ ವಿಷಯದ ಸಲುವಾಗಿ ಮೊದಲಿನಿಂದಲೂ ನಮ್ಮ ಮತ್ತು ಆರೋಪಿತರ ಮಧ್ಯೆ ತಕರಾರು ಇದೆ ಎಂದರೆ ಸರಿ. ನನ್ನ ಮನೆಗೆ ಸೇರಿದ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು

ಕಟ್ಟಿಗೆಗಳನ್ನು ಹಾಕಿದ ವಿಷಯವಾಗಿ ನನ್ನೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಮತ್ತು ಬಡಿಗೆಯಿಂದ ಹೊಡೆದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಮಾನವಿ.

ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

ಸಿ.ಸಿ. ಸಂಖ್ಯೆಃ 183/2020 CW-4 PW- 2

| | |
|---|---|
| ಹೆಸರು | ನೀಲಮ್ಮ |
| ಗಂಡನ ಹೆಸರು | ಆಂಜನೇಯ |
| ವಯಸ್ಸು | 35 |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ರಾಜರಬಂಡ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-06-2024

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 1 ನನ್ನ ಗಂಡ. ಚಾ.ಸಾ. 5 ಮತ್ತು 6 ಗೊತ್ತು. ಆರೋಪಿತರು ಗೊತ್ತು. 4 ವರ್ಷಗಳ ಹಿಂದೆ ಬೆ. 7.00 ಕ್ಕೆ ನಾವು ಮನೆಯಲ್ಲಿ ಇದ್ದಾಗ ಆರೋಪಿತರು ಮತ್ತು ಚಾ.ಸಾ. 1 ರ ಕಟ್ಟಿಗೆಗಳು ಹಾಕಿದ ವಿಷಯವಾಗಿ ಜಗಳ ಆಗಿತ್ತು. ಆರೋಪಿತರಿಗೆ ಬಡಿಗೆಗಳನ್ನು ತೆಗೆಯುವಂತೆ ಹೇಳಿದಾಗ ಬಡಿಗೆಯಿಂದ ಚಾ.ಸಾ. 1 ರ ಕೈಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ನಾನು, ಚಾ.ಸಾ. 5 ಮತ್ತು 6 ಬಿಡಿಸಿರುತ್ತೇವೆ. ಆಗ ಆರೋಪಿತರು ಚಾ.ಸಾ. 1 ರಿಗೆ ಕೊಲ್ಲುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ಪೋಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಬಡಿಗೆ ಜಪ್ತುಪಡಿಸಿಕೊಂಡಿರುತ್ತಾರೆ. ಆ ದಿನ ಪೋಲೀಸರು ಜಪ್ತಿಪಡಿಸಿಕೊಂಡ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದೆ ಇದ್ದು, ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ನಾನು ಆ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ಆರೋಪಿತರು ಚಾ.ಸಾ. 1 ರಿಗೆ ಸೂಳೇಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ. ಎಸ್.ಎಸ್.ಎನ್. ವಕೀಲರಿಂದ

ಜಗಳವು ಬೆ. 7.00 ರಿಂದ 8.00 ರವರೆಗೆ ನಡೆದಿರುತ್ತದೆ. ಕಟ್ಟಿಗೆಗಳು ಹಾಕಿದ ಜಾಗ ನಮಗೆ ಸೇರಿರುತ್ತದೆ. ಆ ಬಗ್ಗೆ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿಲ್ಲ. ಆ ದಿನ ನನ್ನ ಗಂಡ ಮದ್ಯಪಾನ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿತರು ಬಡಿಗೆಯಿಂದ ಹೊಡೆದಿರುವುದರಿಂದ ಚಾ.ಸಾ. 1 ರಿಗೆ ರಕ್ತಗಾಯ ಆಗಿರುತ್ತದೆ. ರಕ್ತ ಹತ್ತಿದ ಬಟ್ಟೆಗಳನ್ನು ಪೋಲೀಸರಿಗೆ ತೋರಿಸಿರುತ್ತೇವೆ. ಆದರೆ, ಬಟ್ಟೆಗಳನ್ನು ಪೋಲೀಸರು ಜಪ್ತಿಪಡಿಸಿಕೊಂಡಿಲ್ಲ. ಆರೋಪಿತರ ಪೈಕಿ ಯಾರು ಎಷ್ಟು ಏಟುಗಳನ್ನು ಬಡಿಗೆಯಿಂದ ಚಾ.ಸಾ. 1 ರಿಗೆ ಹೊಡೆದಿರುತ್ತಾರೆ ಹೇಳಲು ಬರುವುದಿಲ್ಲ. ಜಗಳದ ಸಮಯದಲ್ಲಿ ಸುಮಾರು 10 15 ಜನರು ಸ್ಥಳದಲ್ಲಿದ್ದರು. ಅವರ ಹೆಸರು ಹೇಳಲು ಬರುವುದಿಲ್ಲ. ಆರೋಪಿತರು ಮತ್ತು ನಮ್ಮ ಮಧ್ಯೆ ಮೊದಲಿನಿಂದಲೂ ತಕರಾರು ಇದೆ ಎಂದರೆ ಸರಿ. ಪೋಲೀಸರು ಸ್ಥಳಕ್ಕೆ ಭೇಟಿಕೊಟ್ಟ ದಿನಾಂಕ ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ ಜನರು ಇರಲಿಲ್ಲ ಎಂದು ಹೇಳುತ್ತಾರೆ. ರಿಮ್ಸ್ ಆಸ್ಪತ್ರೆಯಲ್ಲಿ 15 ದಿನ ಇದ್ದೇವು. ಚಾ.ಸಾ. 1 ರನ್ನು ಮೋಟಾರ್ ಸೈಕಲ್ ಮೇಲೆ ಕರೆದುಕೊಂಡು ಹೋಗಿದ್ದೇವು. 4 ವರ್ಷಗಳ ಹಿಂದೆ ಆರೋಪಿತರು ಚಾ.ಸಾ. 1 ರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಬಡಿಗೆಯಿಂದ ಹೊಡೆಬಡೆ ಮಾಡಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ

ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಮಾನವಿ.